ಸಿ.ಆರ್.ಎಫ್. ನಿಧಿಯಿಂದ ಬಿಡುಗಡೆಯಾದ ಅನುದಾನ

475(716); ಶ್ರೀ ಕೋನರೆಡ್ಡಿ ಎನ್. ಎಚ್. (ನವಲಗುಂದ)

ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಭಾರತ ಸರ್ಕಾರದ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್.) ನಿಂದ ಬಿಡುಗಡೆಯಾದ ಅನುದಾನವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

ಆ) ಸಿ.ಆರ್.ಎಫ್. ಅಡಿಯಲ್ಲಿ ಪೂರ್ಣಗೊಂಡ ರಸ್ತೆ ಕಾಮಗಾರಿಗಳೆಷ್ಟು; ಪ್ರತಿ ಟೆಂಡರ್‌ನ ಮೊತ್ತವೆಷ್ಟು; (ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳ ಸಂಪೂರ್ಣ ವಿವರ ನೀಡುವುದು)

ಇ) ಸಿ.ಆರ್.ಎಫ್. ಅಡಿಯಲ್ಲಿ ಪೂರ್ಣಗೊಳ್ಳದ ರಸ್ತೆಗಳೆಷ್ಟು; ಪೂರ್ಣಗೊಳ್ಳದಿರಲು ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕಳೆದ ಮೂರು ವರ್ಷಗಳಿಂದ ಭಾರತ ಸರ್ಕಾರದ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್.) ನಿಂದ ಯಾವುದೇ ಅನುದಾನವು ಬಿಡುಗಡೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮತ್ಸ್ಯಾಶ್ರಯ ಯೋಜನೆಯಲ್ಲಿ ಗೃಹ ನಿರ್ಮಾಣ

476(651); ಶ್ರೀ ಮಕ್ಬೂಲ್ ಎಸ್. ಬಾಗವಾನ್ (ಬಿಜಾಪುರ ನಗರ)

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ವಿಜಾಪುರ (ನಗರ) ಕ್ಷೇತ್ರದಲ್ಲಿ ಮೀನುಗಾರರಿಗೆ ಎಷ್ಟು ವಸತಿ ಮನೆಗಳನ್ನು ಮಂಜೂರು ಮಾಡಲಾಗುವುದು;